ಆ) ಗೋವಾ ಸ್ವಾತಂತ್ರ್ಯ ಹೋರಾಟಗಾರರಿಗೆ ಗೌರವಧನವನ್ನು ಸರ್ಕಾರದಿಂದ ನೀಡಲಾಗುತ್ತಿದೆಯೇ;

ಇ) ನೀಡದೆ ಇದ್ದಲ್ಲಿ ಹಿಂದೆ ಪೋರ್ಚುಗೀಸರ ವಿರುದ್ಧ ಗೋವಾ ವಿಮೋಚನೆಗಾಗಿ ಹೋರಾಟ ನಡೆಸಿ ತಮ್ಮ ಆಸ್ತಿ–ಪಾಸ್ತಿ ಕಳೆದುಕೊಂಡು ಅಸಹಾಯಕ ಸ್ಥಿತಿಯಲ್ಲಿರುವ ಗೋವಾ ಸ್ವಾತಂತ್ರ್ಯ ಹೋರಾಟಗಾರರಿಗೆ ಗೌರವಧನವನ್ನು ನೀಡಲು ಸರ್ಕಾರ ಕೈಗೊಂಡ ಕ್ರಮವೇನು;

ಈ) ಗೌರವಧನ ನೀಡುವ ಉದ್ದೇಶವಿದ್ದಲ್ಲಿ ಎಷ್ಟು ಜನರಿಗೆ ಎಷ್ಟು ಮಾಸಿಕ ಗೌರವ ಧನ ನೀಡಲಾಗುವುದು;

ಉ) ಯಾವ ಕಾಲಮಿತಿಯೊಳಗೆ ಗೌರವ ಧನವನ್ನು ನೀಡಲಾಗುವುದು?

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿಗಳು) :

ಅ) ಶ್ರೀ ಜಿ.ಎಲ್.ರಾಯರೆಡ್ಡಿಯವರು ನೀಡಿದ ಪ್ರಮಾಣ ಪತ್ರದ ಆಧಾರದಂತೆ ಗೋವಾ ಸ್ವಾತಂತ್ರ್ಯ ಹೋರಾಟಗಾರರ ಸಂಖ್ಯೆ : 1312.

ಆ) ಇಲ್ಲ.

ಇ) 2007–08ನೇ ಸಾಲಿನ ಆಯವ್ಯಯದಲ್ಲಿ ಗೋವಾ ವಿಮೋಚನಾ ಚಳುವಳಿಗಾರರಿಗೆ ಮಾಸಿಕ ರೂ.2000/–ಗಳನ್ನು ರಾಜ್ಯ ಗೌರವಧನ ನೀಡುವ ಬಗ್ಗೆ ಘೋಷಿಸಲಾಗಿದೆ. ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಉ) ಕಾಲಮಿತಿ ನಿಗದಿಪಡಿಸಿಲ್ಲ.

1365 (1358) ಶ್ರೀ ಸಿಂಧೂರ ಜಿ.ರಾಜಶೇಖರ (ಶಿಗ್ಗಾಂವ್) : ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ ತಾಲ್ಲೂಕು, ಬಂಕಾಪುರ ಪಟ್ಟಣದಲ್ಲಿ ಆರಕ್ಷಕ ಠಾಣೆಯ ಕಟ್ಟಡ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಬಂಕಾಪುರ ಪಟ್ಟಣದಲ್ಲಿ ಆರಕ್ಷಕ ಠಾಣೆ ಕಟ್ಟಡ ನಿರ್ಮಾಣ ಕಾರ್ಯವನ್ನು ಸರ್ಕಾರದಿಂದ ಯಾವಾಗ ಪ್ರಾರಂಭಿಸ ಲಾಗುವುದು?

ಇ) ಸವಣೂರ ತಾಲ್ಲೂಕು, ಯಲವಿಗಿ ಹಾಗೂ ಹತ್ತಿಮತ್ತೂರ ಗ್ರಾಮಗಳಲ್ಲಿ ಆರಕ್ಷಕ ಠಾಣೆ ಪ್ರಾರಂಭಿಸುವ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಈ ಗ್ರಾಮಗಳಲ್ಲಿ ಆರಕ್ಷಕ ಠಾಣೆ ಯಾವಾಗ ಪ್ರಾರಂಭಿಸಲಾಗುವುದು?

ಉ) ಶಿಗ್ಗಾಂವ–ಸವಣೂರ–ತಡಸ ಆರಕ್ಷಕ ಠಾಣೆಗಳಲ್ಲಿ ಸಿಬ್ಬಂದಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಊ) ಹಾಗಿದ್ದಲ್ಲಿ, ಈ ಠಾಣೆಗಳಲ್ಲಿ ಸಿಬ್ಬಂದಿ ಕೊರತೆ ನೀಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎಂ.ಪಿ.ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಶಿಗ್ಗಾಂವ್ ತಾಲ್ಲೂಕು, ಬಂಕಾಪುರ ಪಟ್ಟಣದಲ್ಲಿ ಆರಕ್ಷಕ ಹೊರ ಠಾಣೆಯ ಕಟ್ಟಡ ಇಲ್ಲದಿರುವುದು ಪೊಲೀಸ್ ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಜಿಲ್ಲಾಧಿಕಾರಿಗಳು, ಹಾವೇರಿ ಜಿಲ್ಲೆಯವರಿಗೆ ನಿವೇಶನ ನೀಡುವಂತೆ ಕೋರಲಾಗಿದ್ದು, ನಿವೇಶನ ಮಂಜೂರಾದ ನಂತರ ಕಟ್ಟಡ ನಿರ್ಮಾಣ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸ ಲಾಗುವುದು.

ಆ) ನಿವೇಶನ ಲಭ್ಯವಾದ ನಂತರ ಅನುದಾನದ ಲಭ್ಯತೆಯ ಆಧಾರದ ಮೇಲೆ ಬಂಕಾಪುರ ಹೊರ ಠಾಣೆಯ ಕಟ್ಟಡ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಇ) ಸವಣೂರು ತಾಲ್ಲೂಕು ಹತ್ತಿಮತ್ತೂರು ಮತ್ತು ಯಲವಿಗಿ ಗ್ರಾಮದಲ್ಲಿ ಹೊರ ಠಾಣೆ ತೆರೆಯುವ ಬಗ್ಗೆ ಪೊಲೀಸ್ ಇಲಾಖೆಯ ಗಮನಕ್ಕೆ ಬಂದಿರುತ್ತದೆ.

ಈ) ಹತ್ತಿಮತ್ತೂರ ಹಾಗೂ ಯಲವಿಗಿ ಗ್ರಾಮಗಳಲ್ಲಿ ಪೊಲೀಸ್ ಹೊರಠಾಣೆ ತೆರೆಯುವ ವಿಷಯವಾಗಿ ಎಸ್.ಪಿ.ಹಾವೇರಿ ರವರಿಂದ ಸೂಕ್ತವಾದ ಪ್ರಸ್ತಾವನೆ ಸರ್ಕಾರಕ್ಕೆ ಬಂದ ನಂತರ ಪರಿಶೀಲಿಸಲಾಗುವುದು.

ಉ) ಶಿಗ್ಗಾಂವ–ಸವಣೂರ–ತಡಕ ಆರಕ್ಷಕ ಠಾಣೆಗಳಲ್ಲಿ ಸಿಬ್ಬಂದಿ ಕೊರತೆ ಇರುವುದು ಪೊಲೀಸ್ ಇಲಾಖೆಯ ಗಮನಕ್ಕೆ ಬಂದಿರುತ್ತದೆ.

ಊ) ಕೊರತೆ ಇರುವ ಸಿಬ್ಬಂದಿಯನ್ನು ಈಗಾಗಲೇ ನೇಮಕಾತಿ ಪ್ರಕ್ರಿಯೆ ಮೂಲಕ ಭರ್ತಿ ಮಾಡಿಕೊಳ್ಳಲಾಗಿದೆ. ಪ್ರಸ್ತುತದಲ್ಲಿ ಸದರಿ ಸಿಬ್ಬಂದಿಯವರನ್ನು ತರಬೇತಿಗಾಗಿ ನಿಯೋಜಿಸಲಾಗಿದೆ. ತರಬೇತಿಯಿಂದ ಬಂದ ಕೂಡಲೇ ಠಾಣೆಗಳಿಗೆ ಸಿಬ್ಬಂದಿಗಳನ್ನು ನಿಯೋಜಿಸಲಾಗುವುದು.

1366 (1587) ಶ್ರೀ ಸಿಂಧೂರ ಜಿ.ರಾಜಶೇಖರ ಶಿಗ್ಗಾಂವ್ : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯಾದ್ಯಂತ ಟ್ರಾಕ್ಟರ ಟ್ರೇಲರ ತಯಾರಕರು ಟ್ರೇಲರಗಳಿಗೆ ಯಾವ ಯಾವ ಅಳತೆಯ (ಸೈಜಿನ) ಟೈರುಗಳನ್ನು ಉಪಯೋಗಿಸಲಿಕ್ಕೆ ಸರ್ಕಾರದಿಂದ ಪರವಾನಿಗೆ ಪಡೆದುಕೊಂಡಿದ್ದಾರೆ? (ವಿವರ ಒದಗಿಸುವುದು);

ಆ) ರಾಜ್ಯದಲ್ಲಿ ಟ್ರಾಕ್ಟರ ಟ್ರೇಲರಗಳಿಗೆ A.R.A.I. ಪುಣೆ ಇವರಿಂದ ತಾಂತ್ರಿಕವಾಗಿ ಅನುಮೋದಿತವಾದ ನಿಗದಿತ ಅಳತೆಯ ಟೈರುಗಳನ್ನು ಬಳಸದೆ, ಅವೈಜ್ಞಾನಿಕವಾಗಿ ವಿವಿಧ ಅಳತೆಯ (ಸೈಜ್) ಟೈರುಗಳನ್ನು ಬಳಸುತ್ತಿದ್ದು, ಇದರಿಂದ ಟ್ರಾಕ್ಟರ ಟ್ರೇಲರಿನ ಸಮಪಾತಳಿಯಾಗದೇ ಅಪಘಾತಗಳಿಗೆ ಕಾರಣವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಕೇಂದ್ರ ಮೋಟಾರು ವಾಹನ 95 ರಂತೆ ಟ್ರಾಕ್ಟರ ಟ್ರೇಲರುಗಳಿಗೆ ನಿಗದಿತ ಅಳತೆಯ ಟೈರುಗಳನ್ನು ಉಪಯೋಗಿಸಲಿಕ್ಕೆ ನಿಯಮ ಇದ್ದು, ಆ ನಿಯಮ ರಾಜ್ಯದಲ್ಲಿ ಪಾಲಿಸದೇ ಇರುವುದು ಸರ್ಕಾರದ ಗಮನದಲ್ಲಿದೆಯೇ?

ಈ) ಹಾಗಿದ್ದಲ್ಲಿ, ಕೇಂದ್ರ ಮೋಟಾರು ವಾಹನ ನಿಯಮ 95ರಂತೆ ಟ್ರಾಕ್ಟರ ಟ್ರೇಲರಗಳಿಂದ ನಿಗದಿತ ಅಳತೆಯ ಟೈರುಗಳನ್ನು ಉಪಯೋಗಿಸಲಿಕ್ಕೆ ಸರ್ಕಾರ ಯಾವಾಗ ಕ್ರಮ ಕೈಗೊಳ್ಳುತ್ತದೆ?

ಶ್ರೀ ಎನ್.ಚಲುವರಾಯಸ್ವಾಮಿ (ಸಾರಿಗೆ ಸಚಿವರು) :

ಅ) ಟ್ರಾಕ್ಟರ ಟ್ರೇಲರ್ ತಯಾರಕರು ಕೇಂದ್ರ ಮೋಟಾರು ವಾಹನ ನಿಯಮಾವಳಿ 1989 ನಿಯಮ 95ರಲ್ಲಿ ನಿಗದಿಪಡಿಸಿರುವ ಅಳತೆಯ ಟೈರುಗಳನ್ನು ಟ್ರೇಕರ್‌ಗಳಿಗೆ ಉಪಯೋಗಿಸಲು ಅನುಮತಿ ಪಡೆದು ಕೊಂಡಿರುತ್ತಾರೆ.

ಆ) ಸರ್ಕಾರದ ಗಮನಕ್ಕೆ ಬಂದಿರುವುದು.